**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ,**
**ಅಂಕೋಲಾ.**

ಸಿಸಿ ನಂಬರ 405/2024

| | | |
|---|---|---|
| ಫಿರ್ಯಾದಿ | - ವಿರುದ್ಧ - | ಆರೋಪಿ |
| ಅಂಕೋಲಾ ಪೊಲೀಸ ಠಾಣೆ | | 2. ಅಶ್ರಫ್ ಜಿ. ಯು ತಂ. ಉಸ್ಮಾನ್,<br>ಪ್ರಾಯಃ 38 ವರ್ಷ, ವೃತ್ತಿಃ ಕೂಲಿ,<br>ಸಾಃ 1-254, ಕಡ್ವಾಯಿ ಮನೆ,<br>ಬಾಳೆಪುನಿ ಪೋ, ಬಂಟ್ವಾಳ ತಾಲೂಕ |

**ಆಪಾದನೆ**

ದಿನಾಂಕಃ 24-04-2024 ರಂದು ಬೆಳಿಗ್ಗೆ 4-00 ಗಂಟೆಗೆ ಅಂಕೋಲಾ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ಹಟ್ಟಿಕೇರಿಯಲ್ಲಿ ಹಾಯ್ದಿರುವ ಎನ್ ಎಚ್ 66 ರಸ್ತೆಯಲ್ಲಿ 2 ನೇ ಆರೋಪಿಯಾದ ನೀನು ನಿನ್ನ ಮೋಟಾರ್ ಸೈಕಲ್ ನಂಃ ಕೆಎ-19/ಇಇ-9006 ನೇದನ್ನು ಚಾಲನಾ ಪರವಾನಗಿ ಪತ್ರ ಹೊಂದಿಲ್ಲದ ಮೃತ ಫಿರ್ಯಾದಿಯವರ ಮಗ ಸುಮಂತ ತಂ. ಯಾದೋಬಾ ಹರಿಕಂತ್ರ ಇವರಿಗೆ ಚಲಾಯಿಸಲು ನೀಡಿ ಆ ಮೂಲಕ ಮೋಟಾರ ವಾಹನ ಕಾಯ್ದೆ ಕಲಂ 180 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀಯಾ ಅಂತಾ ನಿನ್ನ ಮೇಲೆ ಆಪಾದನೆ ಇರುತ್ತದೆ.

ಎರಡನೇಯದಾಗಿ ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಂದು 2 ನೇ ಆರೋಪಿಯಾದ ನೀನು ಮೋಟಾರ್ ಸೈಕಲ್ ನಂಃ ಕೆಎ-19/ಇಇ-9006 ನೇದನ್ನು ವಿಮೆ ನವೀಕರಣ ಮಾಡಿಸದೇ ಸುಮಂತ ತಂ. ಯಾದೋಬಾ ಹರಿಕಂತ್ರ ಇವರಿಗೆ ಚಲಾಯಿಸಲು ನೀಡಿ ಆ ಮೂಲಕ ಮೋಟಾರ ವಾಹನ ಕಾಯ್ದೆ ಕಲಂ .

196 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀಯಾ ಅಂತಾ ನಿನ್ನ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆಃ 1 ನಿನಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ಆಪಾದನೆ ಬಗ್ಗೆ ನಿನಗೆ ಅರ್ಥವಾಯಿತೇ?

ಉತ್ತರಃ ತಿಳಿಯಿತು

ಪ್ರಶ್ನೆಃ 2 ಮೇಲ್ಕಂಡ ಅಪರಾಧಗಳಿಗೆ ಸಂಬಂಧಪಟ್ಟಂತೆ ತಪ್ಪು ಒಪ್ಪಿಕೊಳ್ಳುತ್ತೀಯಾ ಅಥವಾ ವಿಚಾರಣೆ ಆಗಬೇಕು ಅಂತಾ ಬಯಸುತ್ತೀಯಾ?

ಉತ್ತರಃ ತಪ್ಪೊಪ್ಪಿಕೊಳ್ಳುತ್ತೇನೆ

( ಮೇಲಿನ ಆಪಾದನೆಯನ್ನು ಆರೋಪಿಗೆ ಬಹಿರಂಗ ನ್ಯಾಯಾಲಯದಲ್ಲಿ ಆತನಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿ ಆತನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

Sd/-

ಅಂಕೋಲಾ **(ಅರ್ಪಿತಾ ಬಿ. ಬೆಲ್ಲದ್)**

ದಿನಾಂಕಃ 04-12-2024 **ಹೆ. ಪ್ರ ದಂ ನ್ಯಾದಂ, ಅಂಕೋಲಾ.**